**ಬೆಂಗಳೂರು ವಿಶ್ವವಿದ್ಯಾಲಯ**

ಸಂಖ್ಯೆ: ಎಸ್‌ವೈಎನ್/ಎಸ್1/166/ಸಾ.ಸ/2022-23

ಜ್ಞಾನಭಾರತಿ
ಬೆಂಗಳೂರು-560 056
ದಿನಾಂಕ: 14-10-2022

**ಗೆ,**

***ಸಿಂಡಿಕೇಟ್ ಸದಸ್ಯರು,***
ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು.

**ಮಾನ್ಯರೆ,**

**ವಿಷಯ:** ದಿನಾಂಕ 10-10-2022 ರಂದು ಜರುಗಿದ 166ನೇ ಸಿಂಡಿಕೇಟ್ ಸಭೆಯ ನಡಾವಳಿಗಳು.

***

ದಿನಾಂಕ 10-10-2022ರಂದು ಬೆಳಗ್ಗೆ 09.00 ಗಂಟೆಗೆ ಬೋರ್ಡ್ ರೂಮ್, ಆಡಳಿತ ಕಛೇರಿ, ಜ್ಞಾನಭಾರತಿ, ಬೆಂಗಳೂರು-560 056, ಇಲ್ಲಿ ಜರುಗಿದ 166 ನೇ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ ಬೆಂಗಳೂರು ವಿಶ್ವವಿದ್ಯಾಲಯ ಪರಿನಿಯಮಾವಳಿ 5.16 ರನ್ವಯ ಕಳುಹಿಸಲಾಗಿದೆ.

ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡಾವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ ಸದರಿ ಪರಿನಿಯಮಾವಳಿಯನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

14/10/22
**ಕುಲಸಚಿವರು**

ಲಗತ್ತು: ಮೇಲಿನಂತೆ.

# ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ: ಎಸ್‌ವೈಎನ್/ಎಸ್1/166/ಸಾ.ಸ/2022-23

ಜ್ಞಾನಭಾರತಿ
ಬೆಂಗಳೂರು-560 056
ದಿನಾಂಕ: 11-10-2022

**ದಿನಾಂಕ 10-10-2022 ರಂದು ಬೆಳಗ್ಗೆ 09.00 ಗಂಟೆಗೆ ಬೋರ್ಡ್ ರೂಮ್, ಆಡಳಿತ ಕಛೇರಿ, ಜ್ಞಾನಭಾರತಿ, ಬೆಂಗಳೂರು-560 056, ಇಲ್ಲಿ ಜರುಗಿದ 166 ನೇ ಸಿಂಡಿಕೇಟ್ ಸಭೆಯ ನಡಾವಳಿಗಳು.**

**ಹಾಜರಾದ ಸದಸ್ಯರು:**

| | | | |
|---|---|---|---|
| 1. | ಪ್ರೊ. ಡಾ. ಜಯಕರ ಎಸ್ ಎಂ<br>ಕುಲಪತಿಗಳು | - | ಸಭಾಧ್ಯಕ್ಷರು |
| 2. | ಪ್ರೊ. ಸಿಂಥಿಯಾ ಮೆನೇಜಸ್ | - | ಸದಸ್ಯರು |
| 3. | ಡಾ. ಸುಧಾಕರ್. ಎಚ್ | - | ಸದಸ್ಯರು |
| 4. | ಶ್ರೀ ಎಂ. ಉದಯಕುಮಾರ್ | - | ಸದಸ್ಯರು |
| 5. | ಶ್ರೀ ಹರೀಶ್ ನಾಯ್ಕ್ | - | ಸದಸ್ಯರು |
| 6. | ಡಾ. ಕೆ.ಎ. ಮಹೇಶ್ವರಯ್ಯ | - | ಸದಸ್ಯರು |
| 7. | ಶ್ರೀಮತಿ ಕ್ಷಮಾ ಕುಲಕರ್ಣಿ | - | ಸದಸ್ಯರು |
| 8. | ಡಾ. ಸಿ.ಆರ್. ಮಹೇಶ್ | - | ಸದಸ್ಯರು |
| 9. | ಶ್ರೀ ಗೋಪಿನಾಥ್ | - | ಸದಸ್ಯರು |
| 10. | ಡಾ. ಎಂ.ವಿ. ಆಶಾ | - | ಸದಸ್ಯರು |
| 11. | ಪ್ರೊ. ಟಿ.ವಿ. ರಾಜು | - | ಸದಸ್ಯರು |
| 12. | ಶ್ರೀ ವಿದೇಯ ಬೆಳಗೋಡೆ ಶ್ರೀಕಂಠ | - | ಸದಸ್ಯರು |
| 13. | ಪ್ರೊ. ವಿ.ವಿ. ಸುರೇಶ್ ಬಾಬು | - | ಸದಸ್ಯರು |
| 14. | ಪ್ರೊ. ಜೆ.ಟಿ. ದೇವರಾಜು,<br>ಕುಲಸಚಿವರು (ಮೌಲ್ಯಮಾಪನ) | - | ಸದಸ್ಯರು |
| 15. | ಪ್ರೊ. ಎಂ ಕೊಟ್ರೇಶ್<br>ಕುಲಸಚಿವರು | - | ಸದಸ್ಯ ಕಾರ್ಯದರ್ಶಿ |

ಎರಡು ನಿಮಿಷ ಪ್ರಾರ್ಥನೆಯ ನಂತರ ಸಭೆ ಪ್ರಾರಂಭವಾಯಿತು.

ಕುಲಸಚಿವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿ ಹೊಸದಾಗಿ ಸಿಂಡಿಕೇಟ್ ಪ್ರಾಧಿಕಾರಕ್ಕೆ ನಾಮನಿರ್ದೇಶಿತಗೊಂಡು ಹಾಜರಿದ್ದ ಪ್ರಾಂಶುಪಾಲರುಗಳಾದ, ಶ್ರೀ ಹರೀಶ್ ನಾಯ್ಕ್, ಡಾ. ಕೆ.ಎ. ಮಹೇಶ್ವರಯ್ಯ ಹಾಗೂ ಶ್ರೀಮತಿ ಕ್ಷಮಾ ಕುಲಕರ್ಣಿ, ಅವರುಗಳನ್ನು ಸಭೆಗೆ ಪರಿಚಯಿಸಿ ಅವರುಗಳಿಗೆ ಸ್ವಾಗತ ಕೋರಿದರು ಮತ್ತು ಸಭೆಯನ್ನು ನಡೆಸಿಕೊಡಬೇಕೆಂದು ಕುಲಪತಿಗಳಲ್ಲಿ ಕೋರಿದರು.

ಅವರು ಮುಂದುವರೆದು, ಸಿಂಡಿಕೇಟ್ ಸದಸ್ಯರಾಗಿ ಕಾರ್ಯನಿರ್ವಹಿಸಿ ನಿರ್ಗಮಿಸಿದ ಪ್ರಾಂಶುಪಲರುಗಳಾದ ಡಾ. ಸುಧೀರ್ ಪೈ, ಡಾ. ಶೈಲಜ, ಡಾ. ಧನಂಜಯ್ ಹಾಗೂ ಶ್ರೀ ಕುಮಾರ ಟಿ ಅವರುಗಳ ಸೇವೆಯನ್ನು ಸ್ಮರಿಸಿ, ಕುಲಪತಿಗಳು ಸದಸ್ಯರೆಲ್ಲರಿಗೂ ಮತ್ತೊಮ್ಮೆ ಸ್ವಾಗತ ಕೋರಿ ಕಾರ್ಯಸೂಚಿಯನ್ನು ಚರ್ಚೆಗೆ ತೆಗೆದುಕೊಂಡರು.

**Proceedings of the 166th meeting of the Syndicate held on 10.10.2022**

**ವಿಷಯ ಸಂಖ್ಯೆ 01:** ದಿನಾಂಕ 17-08-2022 ರಂದು ಜರುಗಿದ 165ನೇ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಸ್ಥಿರೀಕರಿಸುವ ಬಗ್ಗೆ

**ನಿರ್ಣಯ:**

ಚರ್ಚೆಯ ನಂತರ, ದಿನಾಂಕ: 17-08-2022 ರಂದು ಜರುಗಿದ 165ನೇ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಸಿಂಡಿಕೇಟ್ ಸ್ಥಿರೀಕರಿಸಿತು.

**Proceedings of the 166th meeting of the Syndicate held on 10.10.2022**

**ವಿಷಯ ಸಂಖ್ಯೆ 02:** ದಿನಾಂಕ 17-08-2022 ರಂದು ಜರುಗಿದ 165ನೇ ಸಿಂಡಿಕೇಟ್ ಸಭೆಯ ನಡಾವಳಿಗಳ ಕ್ರಮದ ಹಾಗೂ ಬಗೆಗಿನ ಅನುಸರಣಾ ವರದಿಗಳು (ATR)

**ನಿರ್ಣಯ:**

ದಿನಾಂಕ 17-08-2022 ರಂದು ಜರುಗಿದ 165ನೇ ಸಿಂಡಿಕೇಟ್ ಸಭೆಯ ನಡಾವಳಿಗಳ ಕ್ರಮದ ಬಗೆಗಿನ ಅನುಸರಣಾ ವರದಿ (ATR)ಗಳನ್ನು ಕೆಳಕಂಡ ಚರ್ಚೆ ಹಾಗೂ ನಿರ್ಣಯಗಳೊಂದಿಗೆ ಸಿಂಡಿಕೇಟ್ ಅನುಮೋದಿಸಿತು.

1. ಡಾ. ಸುಧಾಕರ ಎಚ್ ಅವರು ಮಾತನಾಡಿ, ದಿನಾಂಕ: 11-04-2022ರ ಸಿಂಡಿಕೇಟ್ ಸಭೆಯ ನಡಾವಳಿಗಳಲ್ಲಿ 50ಕ್ಕೂ ಹೆಚ್ಚು ವಿಷಯಗಳನ್ನು ಪರಿಚಲನೆ ಮೂಲಕ ಕಳುಹಿಸಿ ಅನುಮೋದನೆಯಾಗಿದೆಯೆಂದು ಹಿಂದಿನ ಕುಲಪತಿಗಳು ನಡಾವಳಿಗಳನ್ನು ಹೊರಡಿಸಿರುತ್ತಾರೆ. ಈ ಬಗ್ಗೆ ಪರಿಶೀಲಿಸಲು ದಿನಾಂಕ: 27-06-2022ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಗಿತ್ತು. ಇಲ್ಲಿಯವರಿಗೂ ಸಮಿತಿಯ ರಚನೆ ಹಾಗೂ ಮುಂದಿನ ಕ್ರಮದ ಬಗ್ಗೆ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲವೆಂದು ತಿಳಿಸಿ, ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಆಗ್ರಹಿಸಿದರು.

   ಪ್ರೊ. ಟಿ.ವಿ. ರಾಜು ಅವರು ಮಾತನಾಡಿ, ಹಿಂದಿನ ಕುಲಪತಿಗಳು ಒಂದೇ ದಿನದಲ್ಲಿ ಕೇಂದ್ರ ಖರೀದಿ ಸಮಿತಿ, ಹಣಕಾಸು ಸಮಿತಿ ಮತ್ತು ಸಿಂಡಿಕೇಟ್ ಸಭೆಗಳನ್ನು ನಡೆಸಿ, ಕೆಲವು

ವಿಷಯಗಳಿಗೆ ಅನುಮೋದನೆಯನ್ನು ಪಡೆದುಕೊಂಡಿರುತ್ತಾರೆ. ಆ ಸಭೆಯಲ್ಲಿ ಅವರು ಹಾಗೂ ಇತರ ಸರ್ಕಾರದ ನಾಮನಿರ್ದೇಶಿತ ಸದಸ್ಯರು ಭಾಗವಹಿಸಿರಲಿಲ್ಲ, ಆದ್ದರಿಂದ ಅದು ಒಂದು ಕೆಟ್ಟ ನಿರ್ದರ್ಶನಕ್ಕೆ ನಾಂದಿ ಹಾಡಿದಂತಾಗಿದೆ. ಆದ್ದರಿಂದ, ಆ ಸಭೆಗಳಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ಮರುಪರಿಶೀಲಿಸಬೇಕೆಂದು ತಿಳಿಸಿದರು.

ಶ್ರೀ ವಿದೇಯ ಬೆಳಗೋಡೆ ಶ್ರೀಕಂಠ ಅವರು ಮಾತನಾಡಿ, ಇತ್ತೀಚೆಗೆ ದಿನಾಂಕ: 07–10–2022ರಂದು ನಡೆದ ಕೇಂದ್ರ ಖರೀದಿ ಸಮಿತಿ ಸಭೆಯ ಸಭಾಸೂಚನೆ/ಕಾರ್ಯಸೂಚಿಯನ್ನು ಮುಂಚಿತವಾಗಿ ಸದಸ್ಯರುಗಳಿಗೆ ಕಳುಹಿಸಿರಲಿಲ್ಲ. ಸಭೆಯ ದಿನಾಂಕದಂದು ದೂರವಾಣಿ ಮೂಲಕ ಸಭೆಯ ನಡೆಯುವ ಬಗ್ಗೆ ತಿಳಿಸಿದ್ದರು. ಇದರಿಂದಾಗಿ ಸಭೆಗೆ ಹಾಜರಾಗಿರಲಿಲ್ಲ. ಆದಕಾರಣ ಆ ಸಭೆಯಲ್ಲಿ ಮಂಡಿತವಾಗಿದ್ದ ಚಿನ್ನದ ಪದಕ ಖರೀದಿ ಬಗ್ಗೆ ವಿವರಗಳನ್ನು ಪರಿಶೀಲಿಸಲು ತಮಗೆ ಸಾಧ್ಯವಾಗಲಿಲ್ಲ. ಆದಕಾರಣ ಆ ವಿಷಯವನ್ನು ಮೊತ್ತೊಮ್ಮೆ ಸದಸ್ಯರುಗಳ ಗಮನಕ್ಕೆ ತಂದು ನಂತರ ತೀರ್ಮಾನ ತೆಗೆದುಕೊಳ್ಳುವುದು ಒಳಿತೆಂದು ತಿಳಿಸಿದರು.

ಡಾ. ಸುಧಾಕರ ಎಚ್ ಅವರು ಇನ್ನು ಮುಂದೆ ನಡೆಯುವ ಸಭಾ ಸೂಚನೆ/ಕಾರ್ಯಸೂಚನೆಗಳನ್ನು ಏಳು ದಿನ ಮುಂಚಿತವಾಗಿ ಸದಸ್ಯರುಗಳಿಗೆ ಕಳುಹಿಸಿಕೊಡಬೇಕೆಂದು ತಿಳಿಸಿದರು.

ಪ್ರೊ. ವಿ.ವಿ. ಸುರೇಶ್ ಬಾಬು ಅವರು ಮಾತನಾಡಿ 57ನೇ ವಾರ್ಷಿಕ ಘಟಿಕೋತ್ಸವಕ್ಕೆ ಚಿನ್ನದ ಪದಕ ಖರೀದಿಸುವ ಬಗ್ಗೆ ಮೂರು ಬಾರಿ ಈ ಪ್ರೊಕ್ಯೂರ್ಮೆಂಟ್ ಮೂಲಕ ಟೆಂಡರ್ ಪ್ರಕ್ರಿಯೆಯನ್ನು ಜಾರಿಗೊಳಿಸಲಾಗಿದೆ. ಮೊದಲ ಬಾರಿ ಆಗಿರುವ ಟೆಂಡರ್ ಪ್ರಕ್ರಿಯೆಯಲ್ಲಿ ಎರಡು ಬಿಡ್‌ದಾರರು ಭಾಗವಹಿಸಿದ್ದು, ಆ ಎರಡು ಬಿಡ್‌ದಾರರು ಟೆಂಡರ್ ನಿಬಂಧನೆಗಳ ಪ್ರಕಾರ ಅರ್ಹರಾಗಿರಲಿಲ್ಲ. 2ನೇ ಬಾರಿ ಯಾರೂ ಅರ್ಹ ಟೆಂಡರ್‌ದಾರರು ಭಾಗವಹಿಸಿರಲಿಲ್ಲ. 3ನೆ ಬಾರಿಗೆ ಒಬ್ಬರೆ ಟೆಂಡರ್‌ದಾರರು ಬಾಗವಹಿಸಿದ್ದು. ಸದರಿ ಟೆಂಡರ್‌ದಾರರು ಕರ್ನಾಟಕದ ಇತರೇ ವಿಶ್ವವಿದ್ಯಾಲಯಗಳಿಗೆ ಘಟಿಕೋತ್ಸವದಲ್ಲಿ ನೀಡುವ ಚಿನ್ನದ ಪದಕಗಳನ್ನು ಸರಬರಾಜು ಮಾಡಿರುತ್ತಾರೆ. ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿರುವ ಟೆಂಡರ್‌ದಾರರು ಒದಗಿಸಿರುವ ದಾಖಲೆಗಳು, ತಾಂತ್ರಿಕ ಸಮಿತಿಯ ನಡಾವಳಿಗಳು ಹಾಗೂ ಇತರೇ ವಿವರಗಳ ಮಾಹಿತಿಯನ್ನು ಸದಸ್ಯರುಗಳಿಗೆ ಒದಗಿಸಿ, ವಿವರಣೆಯ ನಂತರ, ವಿಷಯವನ್ನು ಇತ್ಯರ್ಥ್ಯಪಡಿಸಬಹುದಾಗಿದೆ. ಆದಕಾರಣ ಸದರಿ ವಿಷಯವನ್ನು ಮುಂದೂಡುವುದು ಬೇಡವೆಂದು ತಿಳಿಸಿದರು.

ಕುಲಸಚಿವರು (ಮೌಲ್ಯಮಾಪನ) ಅವರು ಮಾತನಾಡಿ KPPT ಕಾಯ್ದೆಯನುಸಾರ ಮೂರನೇ ಬಾರಿಗೆ ಟೆಂಡರ್ ಪ್ರಕ್ರಿಯೆಯಲ್ಲಿ ಒಬ್ಬರೇ ಟೆಂಡರ್‌ದಾರರು ಭಾಗವಹಿಸಿದ್ದ ಕಾರಣ ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಬಹುದಾಗಿದೆ ಎಂದು ತಿಳಿಸಿದರು.

ಡಾ. ಸಿ.ಆರ್. ಮಹೇಶ್ ಅವರು ಮಾತನಾಡಿ, ಏಪ್ರಿಲ್‌ನಲ್ಲಿ ನಡೆದ ವಿಶೇಷ ಸಿಂಡಿಕೇಟ್ ಸಭೆಯಲ್ಲಿ ಮಂಡಿತವಾದ ಏಳು ವಿಷಯಗಳ ಬಗ್ಗೆ ಸಭೆಗೆ ಮಾಹಿತಿ ನೀಡಿದರು.

**ನಿರ್ಣಯ:**

ದೀರ್ಘ ಚರ್ಚೆಯ ನಂತರ, ದಿನಾಂಕ: 27-06-2022ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಮೇಲ್ಕಂಡ ವಿಷಯದ ಬಗ್ಗೆ ತೆಗೆದುಕೊಂಡ ನಿರ್ಣಯವನ್ನು ಮಾರ್ಪಡಿಸಿ, ಪ್ರೊ. ಟಿ.ವಿ. ರಾಜು ಅವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ಸೇರ್ಪಡೆಗೊಳಿಸಲು ಮತ್ತು ಈಗಾಗಲೇ ನಿರ್ಣಯಿಸಿರುವಂತೆ ಸಮಿತಿಯ ಅಧಿಸೂಚನೆಯನ್ನು ಕೂಡಲೇ ಹೊರಡಿಸಬೇಕೆಂದು ಹಾಗೂ ದಿನಾಂಕ: 09-02-2022 ಮತ್ತು ದಿನಾಂಕ: 11-04-2022ರ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಸಮಿತಿಯು ಪರಿಶೀಲಿಸಿ ವರದಿ ನಿಡಬೇಕೆಂದು ಸಿಂಡಿಕೇಟ್ ನಿರ್ಣಯಿಸಿತು.

2. ಈ ಹಂತದಲ್ಲಿ, ನಿರ್ವಹಣಾ ವಿಭಾಗದಲ್ಲಿ 4 ವಿದ್ಯಾರ್ಥಿಗಳಿಗೆ ಪ್ರವೇಶ ನೀಡದಿರುವ ಬಗ್ಗೆ ವಿದ್ಯಾರ್ಥಿಗಳು ಸಿಂಡಿಕೇಟ್ ಸಭೆಗೆ ಮನವಿ ಸಲ್ಲಿಸಿ, ನ್ಯಾಯ ದೊರಕಿಸಿಕೊಡಬೇಕೆಂದು ಕೋರಿದರು.

3. ಡಾ. ಸುಧಾಕರ ಎಚ್ ಅವರು ಮಾತನಾಡಿ, ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ನಿರ್ವಹಣಾ ವಿಭಾಗದಲ್ಲಿ ಮಾನ್ಯ ಉಚ್ಚನ್ಯಾಯಾಲಯದ ಆದೇಶದ ಮೇರೆಗೆ 4 ವಿದ್ಯಾರ್ಥಿಗಳಿಗೆ ಪಿ.ಎಚ್.ಡಿ. ಕೋರ್ಸಿಗೆ ನೋಂದಣಿ ಮಾಡಿ ವರದಿ ಸಲ್ಲಿಸುವ ಸಂಬಂಧ ಸಮಿತಿಯನ್ನು ರಚಿಸಲಾಗಿತ್ತು. ಇಲ್ಲಿಯವರಿಗೂ ಕ್ರಮ ತೆಗೆದುಕೊಳ್ಳದೆ ವಿಷಯವನ್ನು ಮುಂದೂಡಲಾಗುತ್ತಿದೆ ಎಂದು ತಿಳಿಸಿದರು.

   ಪ್ರೊ. ವಿ.ವಿ. ಸುರೇಶ್ ಬಾಬು ಅವರು ಮಾತನಾಡಿ, ಸದರಿ ವಿಷಯದ ಬಗ್ಗೆ ಇಲ್ಲಿಯವರೆಗೂ ಆಗಿರುವ ಬೆಳವಣಿಗೆಯನ್ನು ಸಿಂಡಿಕೇಟ್ ಸಭೆಗೆ ವಿವರಿಸಿದರು.

   ಶ್ರೀ ಉದಯಕುಮಾರ್ ಎಂ ಅವರು ಮಾತನಾಡಿ, ಇಬ್ಬರು ಸದಸ್ಯರುಗಳನ್ನೊಳಗೊಂಡ ಸಮಿತಿಯ ಅಧ್ಯಕ್ಷರಾದ ಪ್ರೊ. ಸಿಂಥಿಯಾ ಮೆನೇಜಸ್ ಹಾಗೂ ಸದಸ್ಯರಾದ ಪ್ರೊ. ವಿ.ವಿ. ಸುರೇಶ್ ಬಾಬು ಅವರುಗಳು ಸಭೆಯಲ್ಲಿ ಹಾಜರಿರುವುದರಿಂದ, ನಿರ್ವಹಣೆ ವಿಭಾಗದ ಇಬ್ಬರು ಪ್ರಾಧ್ಯಾಪಕರುಗಳಲ್ಲಿ ತಲಾ ಒಂದು ಸೀಟು ಖಾಲಿ ಇರುವುದರಿಂದ ಮತ್ತು ಒಬ್ಬ ವಿದ್ಯಾರ್ಥಿ ಮಾತ್ರ ಹೆಚ್ಚುವರಿ ಆಗುವುದರಿಂದ, 4 ವಿದ್ಯಾರ್ಥಿಗಳನ್ನು ಸಮವಾಗಿ ತಲಾ 2 ವಿದ್ಯಾರ್ಥಿಗಳಿಗೆ ಸದರಿ ಪ್ರಾಧ್ಯಾಪಕರುಗಳ ಅಡಿಯಲ್ಲಿ ಪಿಎಚ್.ಡಿ. ಕೋರ್ಸಿಗೆ ನೋಂದಣೆ ಮಾಡಿಸುವ ಬಗ್ಗೆ ಕ್ರಮ ತೆಗೆದುಕೊಳ್ಳಲು ಈ ಸಭೆಯಲ್ಲೇ ಒಂದು ನಿರ್ಣಯ ತೆಗೆದುಕೊಂಡು ವಿಷಯವನ್ನು ಇಂದೇ ಇತ್ಯರ್ಥಗೊಳಿಸಬಹುದಾಗಿದೆ ಎಂದು ತಿಳಿಸಿದರು.

ಪ್ರೊ. ಟಿ.ವಿ. ರಾಜು ಅವರು ಮಾತನಾಡಿ, ವಿದ್ಯಾರ್ಥಿಗಳಿಗೆ ಕೋರ್ಸು ವರ್ಕ್ ನಡೆಸುವ ಬಗ್ಗೆಯೂ ಕೂಡ ಒಂದು ತೀರ್ಮಾನಕ್ಕೆ ಬರಬೇಕಾಗುತ್ತದೆ ಎಂದು ತಿಳಿಸಿದರು.

ಸದರಿ 4 ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿ ಕೋರ್ಸ್ ವರ್ಕ ನಡೆಸಲು ಕಷ್ಟಸಾಧ್ಯವೆಂದು ಸಿಂಡಿಕೇಟ್ ಗಮನಕ್ಕೆ ತರಲಾಯಿತು.

ಪ್ರೊ. ವಿ.ವಿ. ಸುರೇಶ್ ಬಾಬು ಅವರು ಮಾತನಾಡಿ, ಇನ್ನೆರಡು ದಿನಗಳ ಒಳಗಾಗಿ ಸದರಿ ವಿದ್ಯಾರ್ಥಿಗಳ ಪಿಎಚ್.ಡಿ. ನೋಂದಣಿಯ ಬಗ್ಗೆ ಸಕಾರಾತ್ಮಕ ಕ್ರಮ ತೆಗೆದುಕೊಳ್ಳುವ ಬಗ್ಗೆ ವರದಿ ಸಲ್ಲಿಸಲಾಗುವುದು ಹಾಗೂ ಸದರಿ ವಿಷಯವನ್ನು ಸಿಂಡಿಕೇಟ್ ಅನುಸಮರ್ಥನೆಗೆ ಮಂಡಿಸಲು ಪರೀಕ್ಷಾ ವಿಭಾಗದಿಂದ ಕ್ರಮ ತೆಗೆದುಕೊಳ್ಳಬಹುದಾಗಿದೆ ಎಂದು ತಿಳಿಸಿದರು.

**ನಿರ್ಣಯ:**

ಚರ್ಚೆಯ ನಂತರ, ನ್ಯಾಯಾಲಯದ ಆದೇಶದಲ್ಲಿ ಉಲ್ಲೇಖವಾಗಿರುವ 4 ವಿದ್ಯಾರ್ಥಿಗಳಿಗೆ ನಿರ್ವಹಣಾ ವಿಭಾಗದಲ್ಲಿ ಪಿ.ಎಚ್.ಡಿ. ಅಧ್ಯಯನಕ್ಕೆ ನೋಂದಣಿ ಮಾಡಿಸಲು ಕ್ರಮ ತೆಗೆದುಕೊಳ್ಳಬೇಕೆಂದು ಹಾಗೂ ಈ ಬಗ್ಗೆ ಕಾನೂನು ತೊಡಕು ಬರದಹಾಗೆ ಆದೇಶ ಹೊರಡಿಸಲು ಅನುವಾಗಲು ಈಗಾಗಲೇ ರಚಿಸಿರುವ ಸಮಿತಿಯ ಸದಸ್ಯರು ಇನ್ನೆರಡು ದಿನಗಳಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ಸಿಂಡಿಕೇಟ್ ನಿರ್ಣಯಿಸಿತು. ಮುಂದುವರೆದು, ಹೆಚ್ಚಿನ ಆರ್ಥಿಕ ಹೊರೆ ಬರದಹಾಗೆ ಸದರಿ ವಿದ್ಯಾರ್ಥಿಗಳಿಗೆ ಕೋರ್ಸ್‌ವರ್ಕ್ ನಡೆಸಲು ಸೂಕ್ತ ಕ್ರಮತೆಗೆದುಕೊಳ್ಳಲು ಸಿಂಡಿಕೇಟ್ ಸೂಚಿಸಿತು.

4. ಶ್ರೀ ವಿದೇಯ ಬೆಳಗೋಡೆ ಶ್ರೀಕಂಠ ಅವರು ಮಾತನಾಡಿ, ಹಿಂದಿನ ಸಿಂಡಿಕೇಟ್ ಸಭೆಯಲ್ಲಿ M/s MSILವತಿಯಿಂದ Security features ಇರುವ nontearable ಖಾಲಿ ಅಂಕಪಟ್ಟಿಗಳನ್ನು ಖರೀದಿಸಬೇಕೆಂದು ನಿರ್ಣಯಿಸಲಾಗಿತ್ತು. ಈ ಬಗ್ಗೆ ತೆಗೆದುಕೊಂಡ ಕ್ರಮದ ಬಗ್ಗೆ ಮಾಹಿತಿ ಬಯಸಿದರು.

   ಕುಲಪತಿಗಳು ಮಾತನಾಡಿ, ಸದರಿ ವಿಷಯದ ಬಗ್ಗೆ ಸರ್ಕಾರದ ಮಟ್ಟದಲ್ಲಿ ಚರ್ಚೆ ನಡೆಯುತ್ತಿದೆ. ಸರ್ಕಾರ ನೀಡುವ ನಿರ್ದೇಶನದನುಸಾರ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

5. ಶ್ರೀ ಗೋಪಿನಾಥ್ ಅವರು ಮಾತನಾಡಿ, ವಿಶ್ವವಿದ್ಯಾಲಯದಲ್ಲಿ ಪ್ರತಿ ತಿಂಗಳು ಅಥವಾ ತ್ರೈಮಾಸಿಕವಾಗಿ ವಿಶ್ವವಿದ್ಯಾಲಯದಿಂದ News Letter ಹೊರತರುವ ಬಗ್ಗೆ ಕ್ರಮತೆಗೆದುಕೊಳ್ಳಲು ಸಲಹೆ ನೀಡಿದರು.

ಕುಲಪತಿಗಳು ಇದು ಒಳ್ಳೆಯ ಸಲಹೆಯಾಗಿದ್ದು, ಈಗಾಗಲೇ ಈ ಕುರಿತು ಅಧ್ಯಾಪಕರುಗಳೊಂದಿಗೆ ಚರ್ಚಿಸಲಾಗಿದೆ. ಶೀಘ್ರದಲ್ಲಿ NAAC ಸಮಿತಿ ಭೇಟಿ ನೀಡುತ್ತಿರುವ ಕಾರಣ ವಿಶ್ವವಿದ್ಯಾಲಯದ News Letter ಹೊರತರಲು ಕ್ರಮ ಕೈಗೊಳ್ಳಲಾಗುವುದು ಹಾಗೂ ಸದಸ್ಯರುಗಳ ಸಲಹೆಯನುಸಾರ News Letter ಹೊರತರಲು ಸಂವಹನ ವಿಭಾಗದ ಪ್ರಾಧ್ಯಾಪಕರೊಬ್ಬರನ್ನು ಮುಖ್ಯ ಸಂಪಾದಕರನ್ನಾಗಿ ಮಾಡಲು ಕ್ರಮವಹಿಸುವುದಾಗಿ ತಿಳಿಸಿದರು.

6. ಡಾ. ಸುಧಾಕರ ಎಚ್ ಅವರು ಮಾತನಾಡಿ, ಡಾ. ರಾಜಪ್ಪ ದಳವಾಯಿ ಅವರಿಗೆ ವೃತ್ತಿಪರ ಯೋಜನೆಯಡಿಯಲ್ಲಿ ಮುಂಬಡ್ತಿ ನೀಡುವ ಬಗ್ಗೆ ತಾವು ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ತಿಳಿಸಿದ್ದು, ಡಾ. ರಾಜಪ್ಪ ದಳವಾಯಿ ಅವರು ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ರೀಡರ್ ಆಗಿ ನೇಮಕೊಂಡಾಗ ಬೆಂಗಳೂರು ವಿಶ್ವವಿದ್ಯಾಲಯವು ಮೊದಲು 2 ವರ್ಷಗಳ ಲೀನ್ ಅವಧಿ ನೀಡಿ ನಂತರ ಲೀನ್ ಅವಧಿಯನ್ನು 1 ವರ್ಷಕ್ಕೆ ಸೀಮಿತಗೊಳಿಸಿದೆ. ಕೆ.ಸಿ.ಎಸ್.ಆರ್ ನಿಯಮಾವಳಿಯನುಸಾರ ವಿಶೇಷ ಸಂದರ್ಭಗಳಲ್ಲಿ ಲೀನ್ ಅವಧಿಯನ್ನು 4 ವರ್ಷಗಳಿಗೆ ವಿಸ್ತರಿಸಲು ಅವಕಾಶವಿರುತ್ತದೆ. ಬೆಂಗಳೂರು ವಿಶ್ವವಿದ್ಯಾಲಯದಿಂದ ಅವರಿಗೆ ಯಾವುದೇ ನೋಟೀಸ್ ನೀಡಿರಲಿಲ್ಲ ಹಾಗೂ ಅವರ ಸೇವೆಯನ್ನು ರದ್ದುಗೊಳಿಸಿರುವ ಬಗ್ಗೆ ವಿಶ್ವವಿದ್ಯಾಲಯದಿಂದ ಆದೇಶ ಹೊರಡಿಸಿರುವುದಿಲ್ಲ. ಅವರು ನಂತರ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ಸೇವೆಯನ್ನು ಬಿಟ್ಟು, ಸರ್ಕಾರದ ಆದೇಶಾನುಸಾರ ಬೆಂಗಳೂರು ವಿಶ್ವವಿದ್ಯಾಲಯದ ಸೇವೆಗೆ ಮರುಸೇರ್ಪಡೆಗೊಂಡಿದ್ದಾರೆ. ಆದ್ದರಿಂದ, ಅವರ ಸೇವೆಯನ್ನು ಪರಿಗಣಿಸಿ, ವೃತ್ತಿಪರ ಯೋಜನೆಯಡಿಯಲ್ಲಿ ಮುಂಬಡ್ತಿ ನೀಡಲು ಒತ್ತಾಯಿಸಿದರು.

ಕುಲಸಚಿವರು ಮಾತನಾಡಿ, 2012ರಿಂದ 2017ರವರೆಗೆ ಗುಲಬರ್ಗಾ ವಿಶ್ವವಿದ್ಯಾಲಯ ಹಾಗೂ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯಗಳಲ್ಲಿ, ಡಾ. ರಾಜಪ್ಪ ದಳವಾಯಿ ಅವರು ಕಾರ್ಯ ನಿರ್ವಹಿಸಿದ ಬಗ್ಗೆ ಹಾಗೂ ಸರ್ಕಾರದ ಪತ್ರದನುಸಾರ 2017ರಲ್ಲಿ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ವರದಿ ಮಾಡಿಕೊಂಡಿರುವ ವಿವರಗಳನ್ನು ಸಿಂಡಿಕೇಟ್ ಗಮನಕ್ಕೆ ತಂದರು.

**ನಿರ್ಣಯ:**

ಕುಲಪತಿಗಳು ಮಾತನಾಡಿ, ಹೊಸದಾಗಿ ಕಾನೂನು ಸಲಹೆಗಾರರು ವರದಿ ಮಾಡಿಕೊಂಡಿರುತ್ತಾರೆ. ಈ ಬಗ್ಗೆ ಅವರ ಅಭಿಪ್ರಾಯ ಪಡೆದು ಎಲ್ಲಾ ವಿವರಗಳೊಂದಿಗೆ ಮುಂದಿನ ಸಿಂಡಿಕೇಟ್ ಸಭೆಗೆ ನಿರ್ಣಯಕ್ಕಾಗಿ ಮಂಡಿಸಲಾಗುವುದೆಂದು ತಿಳಿಸಿದರು.

7. ಶ್ರೀ ಗೋಪಿನಾಥ್ ಅವರು ಮಾತನಾಡಿ, ವಿಶ್ವವಿದ್ಯಾಲಯದ ವೆಬ್‌ಸೈಟ್ ಅನ್ನು ಉನ್ನತೀಕರಿಸಬೇಕೆಂದು ತಿಳಿಸಿದರು.

ಕುಲಪತಿಗಳು ಉತ್ತರಿಸಿ ಸರ್ಕಾರದವತಿಯಿಂದಲೇ Domain ಅನ್ನು ನಿರ್ವಹಿಸುವುದರಿಂದ ವಿಶ್ವವಿದ್ಯಾಲಯದಿಂದ ವೆಬ್‌ಸೈಟ್‌ಗೆ ಅಗತ್ಯ ಮಾಹಿತಿ ಒದಗಿಸಲು ಈಗಾಗಲೆ ಒಂದು ತಾಂತ್ರಿಕ ಸಮಿತಿಯನ್ನು ರಚಿಸಿದ್ದು, ಸದರಿ ಸಮಿತಿಯು ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತಿಯಾಗಿರುವುದನ್ನು ಸಿಂಡಿಕೇಟ್ ಗಮನಕ್ಕೆ ತಂದರು.

8. ಈ ಹಂತದಲ್ಲಿ ಕುಲಸಚಿವರು ಮಾಹಿತಿ ನೀಡಿ ಕು. ಶಿಲ್ಪಶ್ರೀ, ಎಂ.ಎಸ್ಸಿ. ಗಣಿತಶಾಸ್ತ್ರ ವಿಭಾಗದ ವಿದ್ಯಾರ್ಥಿ ಇವರ ಮೇಲೆ ವಿಶ್ವವಿದ್ಯಾಲಯದ ಮಹಿಳಾ ವಸತಿ ನಿಲಯದ ಹತ್ತಿರ ಇಂದು ಸುಮಾರು 10.30ಗಂಟೆ ಸಮಯದಲ್ಲಿ ಬಸ್ ಹರಿದ ಕಾರಣ ಅಪಘಾತಕ್ಕೆ ಒಳಗಾಗಿದ್ದು, ಸದರಿ ವಿದ್ಯಾರ್ಥಿಯನ್ನು ಹೆಚ್ಚಿನ ಚಿಕಿತ್ಸೆಗಾಗಿ ಪೋರ್ಟಿಸ್ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುವುದಾಗಿ ಹಾಗೂ ವಿಶ್ವವಿದ್ಯಾಲಯದ ವಿದ್ಯಾರ್ಥಿ ಕ್ಷೇಮಪಾಲಕರು ಮತ್ತು ಸಂಬಂಧಿಸಿದ ವಾರ್ಡನ್ ಅವರುಗಳಿಗೆ ಆಸ್ಪತ್ರೆಗೆ ಭೇಟಿ ನೀಡಿ ಸದರಿ ವಿದ್ಯಾರ್ಥಿನಿಗೆ ಅಗತ್ಯ ಚಿಕಿತ್ಸೆ ಕೊಡಿಸಲು ಸೂಚಿಸಲಾಗಿದೆ ಎಂದು ತಿಳಿಸಿದರು. ಅವರು ಮುಂದುವರೆದು, ಈ ಘಟನೆಯಿಂದಾಗಿ ವಿಶ್ವವಿದ್ಯಾಲಯದ 1000ಕ್ಕೂ ಹೆಚ್ಚು ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿ, ಜ್ಞಾನಭಾರತಿ ಆವರಣದ ಎಲ್ಲಾ ರಸ್ತೆಗಳನ್ನು ತಡೆದು, ಪ್ರತಿಭಟಣೆ ನಡೆಸುತ್ತಿದ್ದಾರೆ ಎಂದು ಸಿಂಡಿಕೇಟ್ ಗಮನಕ್ಕೆ ತಂದರು. ಸದಸ್ಯರುಗಳು ಮಾತನಾಡಿ, ವಿಶ್ವವಿದ್ಯಾಲಯದ ಆವರಣದೊಳಗೆ ವಾಹನಗಳ ದಟ್ಟಣೆಯಿಂದಾಗಿ ಆಗಿಂದ್ದಾಗ್ಗೆ ಅಪಘಾತಗಳು ಸಂಭವಿಸುತ್ತಿರುವುದರಿಂದ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಗಳ ಅಪಘಾತದಿಂದ ತೊಂದರೆಗಳಿಗೊಳಗಾಗಿದ್ದಾರೆ. ಜ್ಞಾನಭಾರತಿ ಆವರಣಕ್ಕೆ ಸಾರ್ವಜನಿಕರು ಮತ್ತು ವಾಹನಗಳಿಗೆ ಮುಕ್ತ ಅವಕಾಶ ಇರುವುದರಿಂದ ಕಳ್ಳತನಕ್ಕೆ ಅವಕಾಶ ಮಾಡಿಕೊಟ್ಟಂತಾಗಿದೆ ಹಾಗೂ ಶಬ್ಧ ಮಾಲಿನ್ಯದಿಂದಾಗಿ, ಶೈಕ್ಷಣಿಕ ಚಟುವಟಿಗೆಗಳಿಗೆ ತೊಂದರೆಯಾಗುತ್ತದೆ. ಆದ್ದರಿಂದ, ಈ ಬಗ್ಗೆ ಸಾರ್ವಜನಿಕರ ವಾಹನಗಳನ್ನು ನಿರ್ಬಂಧಿಸುವ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹಾಗೂ ಸದರಿ ವಿದ್ಯಾರ್ಥಿಯ ಚಿಕಿತ್ಸೆ ವ್ಯೆಚ್ಚವನ್ನು ವಿಶ್ವವಿದ್ಯಾಲಯ ಭರಿಸಬೇಕೆಂದು ತಿಳಿಸಿದರು.

ಕುಲಪತಿಗಳು ಮಾತನಾಡಿ, ಜ್ಞಾನಭಾರತಿ ಆವರಣದೊಳಗಿರುವ ರಸ್ತೆಗಳಲ್ಲಿ ವಾಹನದಟ್ಟಣೆ ಅಧಿಕವಾಗಿರುವುದರಿಂದ ಆಗಿಂದಾಗ್ಗೆ ಅಪಘಾತಗಳು ಸಂಭವಿಸುತ್ತಿವೆ. ವಾಹನದಟ್ಟಣೆಯಿಂದಾಗಿ ಶೈಕ್ಷಣಿಕ ಚಟುವಟಿಕೆಗಳಿಗೂ ಸಹ ತೊಂದರೆಯಾಗಿತ್ತಿದೆ. ಆದ್ದರಿಂದ ಸಾರ್ವಜನಿಕರ ವಾಹನಗಳ ಓಡಾಟಕ್ಕೆ ನಿರ್ಬಂಧ ಹೇರುವ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಸರ್ಕಾರವನ್ನು ಕೋರಬಹುದಾಗಿದೆ ಎಂದು ತಿಳಿಸಿದರು.

**ನಿರ್ಣಯ:**

ಚರ್ಚೆಯ ನಂತರ, ಇಂದು ವಿಶ್ವವಿದ್ಯಾಲಯದ ಮಹಿಳಾ ವಸತಿ ನಿಲಯದ ಹತ್ತಿರ ರಸ್ತೆಯಲ್ಲಿ ಅಪಘಾತಕ್ಕೆ ಒಳಗಾದ ಕು. ಶಿಲ್ಪಶ್ರೀ, ಎಂ.ಎಸ್ಸಿ. ಗಣಿತಶಾಸ್ತ್ರ ವಿಭಾಗದ ವಿದ್ಯಾರ್ಥಿನಿಯ ಎಲ್ಲಾ

ಚಿಕಿತ್ಸಾ ವೈಚ್ಚವನ್ನು ವಿಶ್ವವಿದ್ಯಾಲಯದವತಿಯಿಂದ ಭರಿಸಬೇಕೆಂದು ನಿರ್ಣಯಿಸಲಾಯಿತು. ಮುಂದುವರೆದು, ಜ್ಞಾನಭಾರತಿ ಆವರಣದಲ್ಲಿ ವಾಹನ ದಟ್ಟಣೆಯಿಂದಾಗಿ ಆಗ್ಗಿಂದಾಗ್ಗೆ ಅಪಘಾತಗಳು ಸಂಭವಿಸುತ್ತಿರುರುವುದರಿಂದ ಜ್ಞಾನಭಾರತಿ ಆವರಣದ ರಸ್ತೆಗಳಲ್ಲಿ ಸಾರ್ವಜನಿಕರ ವಾಹನ ಸಂಚಾರವನ್ನು ನಿರ್ಬಂಧಿಸಬೇಕೆಂದು ಸಿಂಡಿಕೇಟ್ ನಿರ್ಣಯಿಸಿ, ಈ ಬಗ್ಗೆ ಆಡಳಿತ ವರ್ಗ ಸರ್ಕಾರದೊಂದಿಗೆ ವ್ಯವಹರಿಸಬೇಕೆಂದು ಸೂಚಿಸಿತು.

9. ಪ್ರೊ. ಟಿ.ವಿ. ರಾಜು ಅವರು ಮಾತನಾಡಿ, ವಿಶ್ವವಿದ್ಯಾಲಯದ ವಕೀಲರ ಪಟ್ಟಿಯನ್ನು ಸಿದ್ಧಪಡಿಸಲು ಅವರನ್ನೊಳಗೊಂಡಂತೆ, ಒಂದು ಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಮಿತಿಯು ಒಂದು ಬಾರಿ ಸಭೆ ನಡೆಸಿದೆ. ಆದರೆ, ಮುಂದೆ ಸಮಿತಿಯ ಸಭೆಯನ್ನು ಕರೆದಿರುವುದಿಲ್ಲ ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ವಿಶ್ವವಿದ್ಯಾಲಯದ ಪರವಾಗಿ ವಾದಿಸಲು ವಕೀಲರನ್ನು ನೇಮಿಸಿಕೊಳ್ಳಲು ಅರ್ಜಿಯನ್ನು ಆಹ್ವಾನಿಸಲಾಗಿತ್ತು. ಈಗಾಗಲೇ ಕೆಲವೊಂದು ಅರ್ಜಿಗಳು ಬಂದಿರುತ್ತವೆ. ಸದಸ್ಯರುಗಳೂ ಸಹ ವಕೀಲರುಗಳ ಹೆಸರುಗಳನ್ನು ಸೂಚಿಸಬಹುದಾಗಿದೆ. ಈ ಎಲ್ಲಾ ಅರ್ಜಿಗಳನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಬಹುದಾಗಿದೆ ಎಂದು ತಿಳಿಸಿದರು.

ಕುಲಪತಿಗಳು ಮಾತನಾಡಿ ಹೊಸದಾಗಿ ಕಾನೂನು ಸಲಹೆಗಾರರು ನೇಮಕೊಂಡಿರುವುದರಿಂದ, ಈ ಬಗ್ಗೆ ಸಭೆ ನಡೆಸಿ ಮುಂದಿನ ಕ್ರಮ ಕೈಗೊಳ್ಳಲು ಸೂಚಿಸುವುದಾಗಿ ತಿಳಿಸಿದರು.

10. ಶ್ರೀ ಉದಯಕುಮಾರ್ ಎಂ, ಅವರು ಮಾತನಾಡಿ, ಮಾನ್ಯ ಉಚ್ಚ ನ್ಯಾಯಾಲಯದ ಆದೇಶಾನುಸಾರ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ದಿನಗೂಲಿ ನೌಕರರನ್ನು ಖಾಯಮಾತಿ ಮಾಡಲು ಅವರ ನೇತೃತ್ವದಲ್ಲಿ ಸಮಿತಿಯನ್ನು ರಚಿಸಿದ್ದರೂ ಕೂಡ ಇಲ್ಲಿಯವರೆಗೆ ಸಮಿತಿಯ ರಚನೆಯ ಬಗ್ಗೆ ಅಧಿಸೂಚನೆ ಹೊರಡಿಸಿರುವುದಿಲ್ಲ, ಸಭೆ ನಡೆಸಿರುವುದಿಲ್ಲ. ದಿನಗೂಲಿ ನೌಕರರು ಕಳೆದ 25 ವರ್ಷಗಳಿಂದ ಕೆಲಸ ನಿರ್ವಹಿಸುತ್ತಿದ್ದಾರೆ. ಮಾನ್ಯ ಸರ್ವೋಚ್ಚ ನ್ಯಾಯಾಲಯವು ಶ್ರೀಮತಿ ಉಮಾದೇವಿ ಪ್ರಕರಣದಲ್ಲಿ ನೀಡಿರುವ ತೀರ್ಪಿನನುಸಾರ ದಿನಾಂಕ: 13-06-2006ಕ್ಕೆ 10 ವರ್ಷ ಪೂರೈಸಿರುವ ಹಾಗೂ ಸರ್ವೋಚ್ಚ ನ್ಯಾಯಾಲಯದ ಅನುಸಾರ ನಾಲ್ಕು ಷರತ್ತುಗಳನ್ನು ಪೂರೈಸಿರುವ ದಿನಗೂಲಿ ನೌಕರರನ್ನು ಖಾಯಮಾತಿ ಮಾಡಬೇಕೆಂದು ಸಿಂಡಿಕೇಟ್ ನಿರ್ಣಯ ತೆಗೆದುಕೊಳ್ಳಬೇಕೆಂದು ಹಾಗೂ ಅರ್ಹ ದಿನಗೂಲಿ ನೌಕರರನ್ನು ಖಾಯಮಾತಿ ಮಾಡಲು ಕ್ರಮತೆಗೆದುಕೊಳ್ಳಬೇಕೆಂದು ಒತ್ತಾಯಿಸಿದರು.

ಕುಲಪತಿಗಳು ಮಾತನಾಡಿ ಈಗಾಗಲೇ ಸರ್ಕಾರಕ್ಕೆ ಪತ್ರ ಬರೆಯಲಾಗಿದ್ದು, ಕಾನೂನಾತ್ಮಕವಾಗಿ ಸರ್ಕಾರದ ಅನುಮತಿ ಪಡೆದು ನ್ಯಾಯಾಲಯಗಳ ಆದೇಶನುಸಾರ ಅರ್ಹ ದಿನಗೂಲಿ ನೌಕರರನ್ನು ಖಾಯಮಾತಿ ಮಾಡಲು ಕ್ರಮ ತೆಗೆದುಕೊಳ್ಳುವುದಾಗಿ ತಿಳಿಸಿದರು.

**Item No. 03:** Cancellation of Endowment and to release the amount to Dr. Chitra Kiran, W/o Late Sri P.B. Suresh, former senate /Syndicate Member of Bangalore University-reg.

***Resolution:***

After detailed discussion, the Syndicate resolved to reject the request of Dr. Chitra Kiran, W/o Late Sri P.B. Suresh, former senate /Syndicate Member of Bangalore University to return the Endowment amount as there was no provision for cancellation of endowment in the Act/Statutes.

***Proceedings of the 166th meeting of the Syndicate held on 10.10.2022***

**ವಿಷಯ ಸಂಖ್ಯೆ 04:** ಬೆಂಗಳೂರು ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ/ಭೋಧಕೇತರ /ಹೊರಗುತ್ತಿಗೆ ನೌಕರರು ಅನಧಿಕೃತವಾಗಿ ವಾಸವಾಗಿರುವ ವಸತಿ ಗೃಹವನ್ನು ಖಾಲಿ ಮಾಡಿಸುವ ಬಗ್ಗೆ.

ಕುಲಸಚಿವರು ಮಾತನಾಡಿ, ಕೆಲವು ನಿವೃತ್ತ ನೌಕರರುಗಳು ಅವರು ನಿವೃತ್ತಿಯ ನಂತರ ವಿಶ್ವವಿದ್ಯಾಲಯದ ವಸತಿ ಗೃಹವನ್ನು ತೆರವುಗೊಳಿಸದೇ ವಾಸಿಸುತ್ತಿದ್ದಾರೆ, ಆದರೆ, ಅವರುಗಳಿಗೆ ಇನ್ನೂ ನಿವೃತ್ತಿ ಸೌಲಭ್ಯ ನೀಡಿರುವುದಿಲ್ಲವೆಂದು ಹಾಗೂ ಕೆಲವು ಹೊರಗುತ್ತಿಗೆ ನೌಕರರು ಅನಧಿಕೃತವಾಗಿ ವಸತಿಗೃಹಗಳನ್ನು ಉಪಯೋಗಿಸುತ್ತಿದ್ದಾರೆ ಎಂದು ಸಿಂಡಿಕೇಟ್‌ಗೆ ತಿಳಿಸಿದರು.

ಡಾ. ಸುಧಾಕರ ಎಚ್ ಅವರು ಮಾತನಾಡಿ, ಪ್ರಾಧ್ಯಾಪಕರುಗಳು ಸುಮಾರು ವರ್ಷ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿರುತ್ತಾರೆ. ತಾಂತ್ರಿಕ ಕಾರಣದಿಂದಾಗಿ ಡಾ. ಟಿ.ಜೆ. ರೇಣುಕಾಪ್ರಸಾದ್ ಅವರಿಗೆ ಪಿಂಚಣಿ ಉಪಲಬ್ಧ ಮಂಜೂರಾತಿಯಾಗಿರುವುದಿಲ್ಲ. ಆದ್ದರಿಂದ ಅವರ ಪಿಂಚಣಿ ಉಪಲಬ್ಧಿಗಳನ್ನು ನಿಯಮಾವಳಿಯನುಸಾರ ಮಂಜೂರು ಮಾಡಲು ಕ್ರಮ ತೆಗೆದುಕೊಳ್ಳಲು ತಿಳಿಸಿದರು.

ಕುಲಪತಿಗಳು ಮಾತನಾಡಿ, ಈ ಬಗ್ಗೆ ಮುಂದಿನ ಸಭೆಯೊಳಗೆ ವಿವರಗಳನ್ನು ಪಡೆದು ಸೂಕ್ತ ನಿರ್ಧಾರ ತೆಗೆದುಕೊಳ್ಳುವುದಾಗಿ ತಿಳಿಸಿದರು.

ಸದಸ್ಯರುಗಳು ಮಾತನಾಡಿ, ಪಿಂಚಣಿ ಮಂಜೂರಾತಿಗೂ ಹಾಗೂ ವಸತಿ ಗೃಹದಲ್ಲಿ ಅನಧಿಕೃತವಾಗಿ ವಾಸವಾಗಿರುವುದಕ್ಕೆ ಸಂಬಂಧವಿರದ ಕಾರಣ, ವಿಶ್ವವಿದ್ಯಾಲಯದ ವಸತಿ ಗೃಹಗಳಲ್ಲಿ ಅನಧಿಕೃತವಾಗಿ ಇರುವ ಎಲ್ಲ ಸಿಬ್ಬಂದಿಗಳಿಗೆ ನೋಟೀಸ್ ಜಾರಿ ಮಾಡಿ ವಸತಿ ಗೃಹ ತೆರವುಗೊಳಿಸಲು ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು.

ನಿರ್ಣಯ:

ವಿಶ್ವವಿದ್ಯಾಲಯದ ವಸತಿ ಗೃಹಗಳಲ್ಲಿ ಅನಧಿಕೃತವಾಗಿ ಇರುವ ಎಲ್ಲ ಸಿಬ್ಬಂದಿಗಳಿಗೆ ಕೂಡಲೇ ನೋಟೀಸ್ ಜಾರಿ ಮಾಡಿ ವಸತಿ ಗೃಹ ತೆರವುಗೊಳಿಸಲು ಕಾನೂನು ಕ್ರಮ ಕೈಗೊಳ್ಳಬೇಕೆಂದು ಸಿಂಡಿಕೇಟ್ ನಿರ್ಣಯಿಸಿತು.

***Proceedings of the 166th meeting of the Syndicate held on 10.10.2022***

**Item No. 05:** To consider the recommendation of Selection Committee for Promotion of UGC teachers-reg.

Sri Udaya Kumar M sought to know whether the procedure as stipulated in the UGC Regulations and Statutes were followed while conducting interview or not. He further, stated that there were no provision in the Statutes to conduct the interview for promotion under CAS after the retirement of Teaching Staff. Hence, he requested to verify the facts and place the details before the Syndicate for taking a decision in the matter.

Prof. T.V. Raju, expressed that the approved Statutes in respect of the CAS promotions are different from the draft Statutes proposed by the University Syndicate. Changes made by the Government in the Statutes would have been brought to the notice of the Syndicate for information. The constitution of Scrutiny Committee has not been approved by the Syndicate. Further, he wanted to know whether the process for promotions of the Teachers named in the agenda note under CAS scheme have been initiated after notifying the revised Statutes or before the issue of revised Statutes. He urged to furnish to the information in the next meeting of the Syndicate.

Dr. Sudhakara H informed that the members are not against extending promotions to the Teachers. The eligible Teachers are to be promoted from time to time. However, proper procedures have to be followed while extending promotions. There was a Circular from the Hon'ble Governor's Office directing all the Vice-Chancellors not to take any policy decisions during the last two months at the end of their tenure. In spite of that, Selection Committee meetings were conducted for CAS promotions. The Scrutiny Committee and Selection Committee meetings were conducted in the absence of the Chairpersons of the respective departments and concerned Deans, who are expert member of the said Committees. He insisted to

redo the process. Further, he insisted to furnish the details with regard to the appointment of Dr. Radhakrishna B R as Assistant Librarian and date of his promotion as Deputy Librarian and the details of Statutes which were inforce during the period of his appointment/promotion as Assistant Librarian and Deputy Librarian and the procedures followed while extending promotion to the post of Deputy Librarian and other eligibility details.

Dr. C.R. Mahesh opined that the recommendations of the Selection may be accepted if procedures are followed and promotions may be extended to the Teachers.

Mr. Udaya Kumar M and Dr. Sudhakara H suggested to convene a Special meeting to discuss the above details.

The Registrar informed that the recommendations of the Selection Committee/Board of Appointment are final. In case, the Syndicate did not agree for the recommendations or any difference between the Board of Appointment and the Syndicate the matter has to be referred to the State Government as per Section 53(7) of the K.S.U. Act, 2000 and the decision of the State Government in that regard is final.

The Vice-Chancellor informed that the revised Statutes for CAS promotions have been notified by the Bangalore University vide notification dated: No.EST-II/CAS/Statutes/2020 dated: 30-05-2022. It is not appropriate to take any decision without knowing the recommendations of the Selection Committees. The Teachers have to be extended promotions as per Statutes from time to time. The pending promotions have to be settled before the visit of the NAAC Peer Team to the University. There is no provision / rule in the Statutes to redo the process, after the conduct of Selection Committee meetings. Therefore, the Syndicate may consider for openingup of the sealed covers containing the proceedings of the Selection Committees and to take a decision case by case after going through the recommendations of the Selection Committees, as per the set procedures/rules.

***Resolution:***

After detailed disucssions, the Syndicate resolved to deffer the matter.

**ವಿಷಯ ಸಂಖ್ಯೆ 06:** 2021-22ನೇ ಸಾಲಿನಲ್ಲಿ ವಿವಿಧ ವಿಭಾಗಗಳಲ್ಲಿ ಪ್ರವೇಶ ಪಡೆದಿರುವ ಪಿ.ಜಿ. ಡಿಪ್ಲೋಮಾ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯಗಳಲ್ಲಿ ಊಟದ ಸೌಲಭ್ಯ ನೀಡಿರುವ ಬಗ್ಗೆ.

ಕುಲಸಚಿವರು ಮಾತನಾಡಿ, ವಿಶ್ವವಿದ್ಯಾಲಯದಲ್ಲಿ ಪಿ.ಜಿ. ಡಿಪ್ಲೊಮಾ ಕೋರ್ಸುಗಳ ಪ್ರವೇಶಾತಿಯ ಬಗ್ಗೆ ಹೊರಡಿಸಿರುವ ಅಧಿಸೂಚನೆಯಲ್ಲಿ ಪಿ.ಜಿ. ಡಿಪ್ಲೋಮಾ ಕೋರ್ಸನ್ನು ಆಡ್ ಆನ್ ಕೋರ್ಸಾಗಿ ನಡೆಸಲಾಗುತ್ತಿದೆ ಹಾಗೂ ಪಿ.ಜಿ. ಡಿಪ್ಲೊಮಾ ಕೋರ್ಸುಗಳ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯ ಇರುವುದಿಲ್ಲವೆಂದು ಷರತ್ತು ವಿಧಿಸಲಾಗಿತ್ತು. ಕಾರಣ ಸರ್ಕಾರದಿಂದ ಯಾವುದೇ ಅನುದಾನ ಬರುವುದಿಲ್ಲ. ಆದಾಗ್ಯೂ ವಿಶ್ವವಿದ್ಯಾಲಯ ನಡೆಸುವ ಪಿ.ಜಿ. ಡಿಪ್ಲೊಮಾ ಕೋರ್ಸಿಗೆ ಪ್ರವೇಶ ಪಡೆದ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದ ವಿದ್ಯಾರ್ಥಿಗಳು ಹಾಸ್ಟೆಲ್ ಸೌಲಭ್ಯ ನೀಡಬೇಕೆಂದು ಒತ್ತಾಯಿಸುತ್ತಿದ್ದಾರೆ. ಈ ಕಾರಣದಿಂದಾಗಿ ಸದರಿ ವಿಷಯವನ್ನು ಸಿಂಡಿಕೇಟ್ ಮುಂದೆ ಮಂಡಿಸಲಾಗಿದೆ ಎಂದು ತಿಳಿಸಿದರು.

ಡಾ. ಸಿ.ಆರ್. ಮಹೇಶ್ ಅವರು ಮಾತನಾಡಿ, ಪ್ರಸ್ತುತ ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳಲ್ಲಿ ನಡೆಸುವ ಪಿ.ಜಿ. ಡಿಪ್ಲೊಮಾ ಕೋರ್ಸುಗಳನ್ನು ಅಧ್ಯಯನ ಮಾಡಿದ ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶಗಳು ಬಹಳ ಕಡಿಮೆ ಆದಕಾರಣ, ಕೌಶಲ್ಯಾಧಾರಿತ ಪಿ.ಜಿ. ಡಿಪ್ಲೊಮಾ ಕೋರ್ಸುಗಳಾದ ಸೈಕೊಲಾಜಿಕಲ್ ಕೌನ್ಸೆಲಿಂಗ್, ಡಿಜಿಟಲ್ ಎಕನಾಮಿ, ಫಾರಿನ್ ಲಾಂಗ್ವೇಜ್ ಮುಂತಾದ ಕೋರ್ಸುಗಳನ್ನು ಪ್ರಾರಂಭಿಸಬೇಕೆಂದು ತಿಳಿಸಿದರು. ಇದರಿಂದಾಗಿ ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶಗಳು ಹೆಚ್ಚುತ್ತವೆ ಎಂದು ತಿಳಿಸಿದರು.

ಡಾ. ಸುಧಾಕರ ಎಚ್ ಅವರು ಮಾತನಾಡಿ, ಈಗಾಗಲೇ ಪ್ರಾರಂಭಿಸಿರುವ ಪಿ.ಜಿ. ಡಿಪ್ಲೋಮಾ ಕೋರ್ಸುಗಳ ಬಗ್ಗ ವಿದ್ಯಾವಿಷಯಕ ಪರಿಷತ್ತು ನಿರ್ಣಯ ತೆಗೆದುಕೊಂಡಿರುವುದರಿಂದ ಕೌಶಲ್ಯಾಧಾರಿತ ಪಿ.ಜಿ. ಡಿಪ್ಲೊಮಾ ಕೋರ್ಸುಗಳ ಪ್ರಾರಂಭದ ಬಗ್ಗೆ ವಿದ್ಯಾವಿಷಯಕ ಪರಿಷತ್ತು ನಿರ್ಣಯಿಸುವುದು ಒಳಿತು. ಈಗಾಗಲೇ ಹಾಸ್ಟೆಲ್‌ನಲ್ಲಿ ಇರುವ ವಿದ್ಯಾರ್ಥಿಗಳಿಗೆ ಒಂದು ಬಾರಿಯ ಅವಕಾಶದಂತೆ ಉಚಿತ ಊಟದ ವ್ಯವಸ್ಥೆ ಮಾಡುವ ಬಗ್ಗೆ ಸಿಂಡಿಕೇಟ್ ಸೂಕ್ತ ನಿರ್ಧಾರ ತೆಗೆದುಕೊಳ್ಳಬಹುದೆಂದು ತಿಳಿಸಿದರು.

ಶ್ರೀ ಉದಯಕುಮಾರ್ ಎಂ ಅವರು ಮಾತನಾಡಿ, ಮುಂದಿನ ವರ್ಷದಿಂದ ಪ್ರಸ್ತುತ ನಡೆಸುತ್ತಿರುವ ಪಿ.ಜಿ. ಡಿಪ್ಲೊಮಾ ಕೋರ್ಸುಗಳನ್ನು ರದ್ದುಪಡಿಸಲು ಕ್ರಮತೆಗೆದುಕೊಳ್ಳಬೇಕೆಂದು ತಿಳಿಸಿದರು.

ಶ್ರೀ ಗೋಪಿನಾಥ್ ಅವರು ಮಾತನಾಡಿ, ಈ ಹಿಂದೆಯೂ ಕೂಡ ಒಂದು ಬಾರಿಯ ಅವಕಾಶದಂತೆ ನಿರ್ಣಯ ಕೈಗೊಳ್ಳಲಾಗಿದೆ. ಆದಕಾರಣ ಮೊತ್ತೊಮ್ಮೆ ಸದರಿ ವಿಷಯವನ್ನು ಮಂಡಿಸಿರುವುದಕ್ಕೆ ತಮ್ಮ ಆಕ್ಷೇಪಣೆಯನ್ನು ವ್ಯಕ್ತಪಡಿಸಿ ಸಂಬಂಧಪಟ್ಟವರು ಸೂಕ್ತ ಕ್ರಮ ಕೈಗೊಳ್ಳಬೇಕಾಗಿತ್ತೆಂದರು. ಸರ್ಕಾರದ ನಿಯಮಾನುಸಾರ ಅರ್ಹವಲ್ಲದ ವಿದ್ಯಾರ್ಥಿಗಳಿಗೆ ಮುಂದಿನ ಸಾಲುಗಳಲ್ಲಿ ಹಾಸ್ಟೆಲ್‌ಗಳಲ್ಲಿ ಇರಲು ಅವಕಾಶ ನೀಡಿದ್ದ ಪಕ್ಷದಲ್ಲಿ ಸಂಬಂಧಪಟ್ಟ ಹಾಸ್ಟೆಲ್ ವಾರ್ಡನ್‌ಗಳನ್ನೇ ಜವಾಬ್ದಾರರನ್ನಾಗಿ ಮಾಡಬಹುದೆಂದು ಸಲಹೆ ನೀಡಿದರು.

ನಿರ್ಣಯ:

ಚರ್ಚೆಯನಂತರ, ಒಂದು ಬಾರಿಯ ಕೊನೆಯ ಅವಕಾಶದಂತೆ, ಪರಾಮರ್ಶಿತ ಟಿಪ್ಪಣಿಯಲ್ಲಿ ತಿಳಿಸಿರುವ ವಿಷಯದಂತೆ, 2021–22ನೇ ಸಾಲಿನಲ್ಲಿ ವಿವಿಧ ವಿಭಾಗಗಳಲ್ಲಿ ಪಿ.ಜಿ. ಡಿಪ್ಲೋಮಾ ಕೋರ್ಸುಗಳಿಗೆ ಪ್ರವೇಶ ಪಡೆದಿರುವ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದ ವಿದ್ಯಾರ್ಥಿಗಳಿಗೆ (ಪುರುಷ ವಿದ್ಯಾರ್ಥಿನಿಲಯ–2ರಲ್ಲಿ 64 ವಿದ್ಯಾರ್ಥಿಗಳು, ಮಹಿಳಾ ವಿದ್ಯಾರ್ಥಿ ನಿಲಯ–2ರಲ್ಲಿ 17 ವಿದ್ಯಾರ್ಥಿಗಳು) ವಿದ್ಯಾರ್ಥಿನಿಲಯಗಳಲ್ಲಿ ಉಚಿತ ವಸತಿ ಹಾಗೂ ಊಟದ ಸೌಲಭ್ಯ ವಿಸ್ತರಿಸಲು ಸಿಂಡಿಕೇಟ್ ನಿರ್ಣಯಿಸಿತು.

ಇನ್ನು ಮುಂದೆ ಪಿ.ಜಿ. ಡಿಪ್ಲೋಮಾ ಕೋರ್ಸುಗಳಿಗೆ ಪ್ರವೇಶ ಪಡೆಯುವ ಯಾವುದೇ ವಿದ್ಯಾರ್ಥಿಗೆ ಉಚಿತ ಹಾಸ್ಟೆಲ್ ಸೌಲಭ್ಯ ಒದಗಿಸಬಾರದೆಂದು ಸಿಂಡಿಕೇಟ್ ನಿರ್ಣಯಿಸಿತು ಹಾಗೂ ಈ ನಿರ್ಣಯವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಒಂದು ವೇಳೆ ಪ್ರವೇಶ ನೀಡಿದ ಪಕ್ಷದಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಬೇಕೆಂದು ನಿರ್ಣಯಿಸಿತು.

ಸಿಂಡಿಕೇಟ್ ಮುಂದುವರೆದು, ಮುಂದಿನ ಶೈಕ್ಷಣಿಕ ವರ್ಷದಿಂದ ಉದ್ಯೋಗಾಧಾರಿತ/ಕೌಶಲ್ಯಾಧಾರಿತ ಪಿ.ಜಿ. ಡಿಪ್ಲೊಮಾ ಕೋರ್ಸುಗಳನ್ನು ಮಾತ್ರ ನಡೆಸಬೇಕೆಂದು ಹಾಗೂ ಸದರಿ ಕೋರ್ಸುಗಳನ್ನು ಪ್ರಾರಂಭಿಸಲು ವಿದ್ಯಾವಿಷಯಕ ಪರಿಷತ್ತಿಗೆ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸಬೇಕೆಂದು ಸಿಂಡಿಕೇಟ್ ನಿರ್ಣಯಿಸಿತು.



**Item No. 24:** The Statutes relating to appointment and promotion of teachers and other academic staff and measures for the maintenance of standards in Higher Education in the Bangalore University, as per the UGC Regulations 2018.

The Vice-Chancellor informed the Syndicate that the draft Statutes relating to the above subject framed by the Karnataka State Higher Education Council have been circulated to all the State Universities by the Government with a direction to take further action. The said Statutes are verified by the draft Statutes framing Committee headed by Prof. Suresh V Nadagoudar, Dean, Faculty of Law and Principal, University Law College. Prof. Suresh V Nadagoudar and officials of concerned section have also discussed with the Vice-Chairman, Karnataka State Higher Education Council. The modifications as suggested by the Vice-Chairman, Karnataka State Higher Education Council will be incorporated while submitting the same to the State Government.

***Resolution:***

After detailed discussions the Syndicate resolved to approve the draft Statutes relating to appointment and promotion of teachers and other academic staff and measures for the maintenance of standards in Higher Education in the Bangalore University, as per the UGC Regulations 2018.

The draft Statutes to be submitted to the State Government after incorporating the modifications as suggested by the Vice-Chairman, Karnataka State Higher Education Council.



**Item No. 27:** Reconstitution of the Academic and Administrative Committee-reg.

***Resolution:***

The Syndicate ratified the action taken by the University in reconstituting the Academic and Administrative (AAA) Committee vide Notification No.DEV/D1/Mid-Term/AARC/22-23 dated: 01-10-2022.

Further, the Syndicate resolved to approve the proposal for payment of remuneration to the Chairperson and members the AAA Committee on par with the rates of sitting fee fixed for the Syndicate meetings and to approval for incurring the other incidental charges including TA, local hospitality and hiring of vehicles etc., during the visit of the said Committee.

***Proceedings of the 166th meeting of the Syndicate held on 10.10.2022***

**ವಿಷಯ ಸಂಖ್ಯೆ 28:** ಬೆಂಗಳೂರು ವಿಶ್ವವಿದ್ಯಾಲಯದ 57ನೇ ವಾರ್ಷಿಕ ಘಟಿಕೋತ್ಸವದಲ್ಲಿ ವಿವಿಧ ಪದವಿಗಳಿಗೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿ ಹಾಗೂ ಪದವಿಗಳನ್ನು ಸ್ವೀಕರಿಸಲಿರುವ ಅಭ್ಯರ್ಥಿಗಳ ಪದವಿ ಪಟ್ಟಿಗಳನ್ನು ಅನುಮೋದಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಬೆಂಗಳೂರು ವಿಶ್ವವಿದ್ಯಾಲಯದ 57ನೇ ವಾರ್ಷಿಕ ಘಟಿಕೋತ್ಸವದಲ್ಲಿ ವಿವಿಧ ಪದವಿಗಳಿಗೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿ ಹಾಗೂ ಪದವಿಗಳನ್ನು ಸ್ವೀಕರಿಸಲಿರುವ ಅಭ್ಯರ್ಥಿಗಳ ಪದವಿ ಪಟ್ಟಿಗಳನ್ನು ಸಿಂಡಿಕೇಟ್ ಪರಿಗಣಿಸಿ ಅನುಮೋದಿಸಿತು.

**ವಿಷಯ ಸಂಖ್ಯೆ 37:** ಪದ್ಮಶ್ರೀ ಇನ್ಸಿಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಅಂಡ್ ಸೈನ್ಸ್, ಬೆಂಗಳೂರು ಇದರ ಅಡಳಿತ ಮಂಡಳಿಯ ಬದಲಾವಣೆಯ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಪದ್ಮಶ್ರೀ ಇನ್ಸಿಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಅಂಡ್ ಸೈನ್ಸ್, ಕೊಮ್ಮಘಟ್ಟ ಗ್ರಾಮ, ಕೆಂಗೇರಿ ಹೋಬಳಿ, ಬೆಂಗಳೂರು–560 060, ಇದರ ಪ್ರಸ್ತುತ ಆಡಳಿತ ಮಂಡಳಿಯಾದ ಪದ್ಮಶ್ರೀ ಚಾರಿಟಬಲ್ ಟ್ರಸ್ಟ್, ಬೆಂಗಳೂರು ಇವರು ಕಾಲೇಜಿನ ಆಡಳಿತವನ್ನು ಟಿ.ಕೆ. ನಾರಾಯಣಪ್ಪ ಫೌಂಡೇಷನ್, ಬೆಂಗಳೂರು, ಇವರಿಗೆ ವರ್ಗಾಯಿಸುವ ಪ್ರಸ್ತಾವನೆಯನ್ನು ಕೆ.ಎಸ್.ಯು. ಅಧಿನಿಯಮ 2000ದ ಪ್ರಕರಣ 59(5)ರ ಅಡಿಯಲ್ಲಿ ಸಿಂಡಿಕೇಟ್ ಪರಿಗಣಿಸಿ ಅನುಮೋದಿಸಿತು.

*Proceedings of the 166th meeting of the Syndicate held on 10.10.2022*

**ವಿಷಯ ಸಂಖ್ಯೆ 38:** ದಿನಾಂಕ: 07.10.2022ರಂದು ನಡೆದ ಕೇಂದ್ರ ಖರೀದಿ ಸಮಿತಿ ನಡಾವಳಿಯ ಅನುಮೋದನೆ ಕುರಿತು.

57ನೇ ವಾರ್ಷಿಕ ಘಟಿಕೋತ್ಸವವು ಡಿಸೆಂಬರ್ ಮೊದಲನೇ ವಾರದಲ್ಲಿ ನಡೆಯುವುದರಿಂದ, ತುರ್ತಾಗಿ ಚಿನ್ನದ ಪದಕಗಳನ್ನು ಖರೀದಿಸುವ ಸಂಬಂಧ ದಿನಾಂಕ: 07.10.2022ರಂದು ನಡೆದ ಕೇಂದ್ರ ಖರೀದಿ ಸಮಿತಿ ನಡಾವಳಿಯ ಅನುಮೋದನೆಯನ್ನು ಕೋರಲಾಯಿತು.

**ನಿರ್ಣಯ:**

ಸುದೀರ್ಘ ಚರ್ಚೆಯ ನಂತರ, ದಿನಾಂಕ: 07.10.2022ರಂದು ನಡೆದ ಕೇಂದ್ರ ಖರೀದಿ ಸಮಿತಿಯ ನಡಾವಳಿಯನ್ನು ಸಿಂಡಿಕೇಟ್ ಪರಿಗಣಿಸಿ ಅನುಮೋದಿಸಿತು.

*Proceedings of the 166th meeting of the Syndicate held on 10.10.2022*

**Item No. 39:** Construction of UVCE Boys Hostel at UVCE Hostel premises and PG/PhD Boys Hostel at Jnana Bharathi Campus, Bangalore University, Bengaluru-reg.

***Resolution:***

The Syndicate ratified the action taken by the University in issuing the administrative order to KHB by approving the additional expenditure and EIRL over the estimated amount vide U.O. No. UE: DM: CONS:UVCE:BH: PG/PhD:BH:JHB:345:2022-23 dated:27-05-2022 and to approve for release of payment.

ಉಳಿದ ಎಲ್ಲಾ ವಿಷಯಗಳನ್ನು ಮುಂದೂಡಲಾಯಿತು.

## GENERAL DISCUSSION:

1. ಜ್ಞಾನಭಾರತಿ ಆವರಣದಲ್ಲಿ ಹಾದು ಹೋಗುವ ನಾಲ್ಕು ಕಡೆಯ ರಸ್ತೆಗಳಲ್ಲಿ ಸಂಚರಿಸುವ ವಾಹನಗಳನ್ನು ಅತಿ ವೇಗದಿಂದ ಚಲಾಯಿಸುತ್ತಿರುವುದರಿಂದ ಆಗಿಂದಾಗ್ಗೆ ಅಪಘಾತಗಳು ಸಂಭವಿಸುತ್ತಿರುವ ಕಾರಣ, ವಾಹನ ವೇಗವನ್ನು ತಗ್ಗಿಸಲು ರಸ್ತೆಗಳ ಸೂಕ್ತ ಸ್ಥಳಗಳಲ್ಲಿ Road Humps ಗಳನ್ನು ನಿರ್ಮಿಸಲು ಸಿಂಡಿಕೇಟ್ ಅನುಮೋದಿಸಿತು.

ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ಕುಲಪತಿಯವರು